




ಹೇಮಂತ ಋತುವಿನಲ್ಲಿ ಅಲ್ಲಿ ಯಾವತ್ತೂ ಮಂಜಿನದೇ ಸಾಮ್ರಾಜ್ಯ, ಆದರೆ ಈ ಬಾರಿ ಹೇಮಂತ ಕಳೆದು ಶಿಶಿರ ಬಂದರೂ ಮಂಜು ತನ್ನ ಕರಾಮತ್ತನ್ನು ತೋರಿಸುತ್ತಲೇ ಇದೆ. ಅಲ್ಲಿ ಯಾವಾಗಲೂ ಮನೆಯ ಸೂರಿನ ಮೇಲೆ ಬಿದ್ದ ಮಂಜನ್ನು ತೆಗೆಸುವ ಅಗತ್ಯವಿರುವುದಿಲ್ಲ. ಸ್ವಲ್ಪ ತಾಪಮಾನ ಹೆಚ್ಚಾದರೂ ತಾನೇ ತಾನಾಗಿ ಕರಗಿ ಹೋಗುತ್ತದೆ. ಆದರೆ ಈ ಬಾರಿ ಬಂದಿರುವ ಮಂಜಿನ ಪ್ರಮಾಣ ಎಷ್ಟು ಹೆಚ್ಚಿದೆಯೆಂದರೆ ಅದನ್ನು ತೆಗೆಸದಿದ್ದರೆ ಸೂರು ಕುಸಿದು ಬೀಳುವ ಸಾಧ್ಯತೆ ಇದೆಯಂತೆ!

ಅಲ್ಲಿನ ಶೀತಲ ವಾತಾವರಣಕ್ಕೆ ತಕ್ಕಂತೆ ಅಲ್ಲಿ ಮನೆಗಳನ್ನೆಲ್ಲಾ ಮರದಿಂದ ಕಟ್ಟಿರುತ್ತಾರೆ. ಅದೂ ಬಹಳ ಹಗುರವಾಗಿರುತ್ತದೆ. ನಮ್ಮ ಕಾಂಕ್ರೀಟ್ ಮನೆಗಳಂತೆ ಮಜಬೂತಾಗಿರುವುದಿಲ್ಲ. ಅದಕ್ಕಾಗಿ ಈ ಬಾರಿ ಕ್ರೇನ್‌ಗಳ ಸಹಾಯದಿಂದ ಮಂಜನ್ನು ತೆಗೆಸುತ್ತಿದ್ದಾರೆ! ಸಾಮಾನ್ಯವಾಗಿ ಈ ಕ್ರೇನ್‌ಗಳಿಗೆ ಮತ್ತು  ಕೆಲಸಗಾರರಿಗೆ ಚಳಿಗಾಲದಲ್ಲಿ ಕೆಲಸವೇ ಇರುವುದಿಲ್ಲ. ಆದರೆ ಈಗ ಅವರಿಗೆ ಬಿಡುವೇ ಇಲ್ಲ, ಎಲ್ಲಿಲ್ಲದೆ ಡಿಮ್ಯಾಂಡು. ಒಂದು ಮನೆಯ ಸೂರಿನ ಮೇಲಿರುವ ಮಂಜನ್ನು ತೆಗೆಯಲು ಕನಿಷ್ಟ 500ಡಾಲರ್ ಖರ್ಚಾಗುತ್ತಿದೆಯಂತೆ!

ಸಾಮಾನ್ಯವಾಗಿ ರಸ್ತೆಗಳ ಮೇಲೆ ಬಿದ್ದ ಮಂಜನ್ನು ಪಕ್ಕಕ್ಕೆ ಸರಿಸುತ್ತಾರೆ. ನಂತರ ಸ್ವಲ್ಪ ಸೂರ್ಯ ಹೊರಗೆ ಬಂದರೂ ಅದು ಕರಗಿ ಹೋಗಿ ಮತ್ತೆ ಮಂಜು ಬೀಳಲು ಸ್ಥಳವಾಗುತ್ತಿತ್ತು. ಆದರೆ ಈಗ ಇರುವ ಮಂಜು ಕರಗುತ್ತಲೇ ಇಲ್ಲ. ಮತ್ತೆ ಮತ್ತೆ ಮಂಜು ಬಿದ್ದು ರಸ್ತೆಗಳ ಅಗಲವೇ ಕಡಿಮೆಯಾಗುತ್ತಿದೆ. ಬೀಳುತ್ತಿರುವ ಮಂಜನ್ನು ಸರಿಸುವುದಾದರೂ ಎಲ್ಲಿಗೆ? ಸೂರ್ಯ ಮುನಿಸಿಕೊಂಡಿರುವುದರಿಂದ ಜನರು ಹೀಟರ್ ಗಳ ಮೂಲಕ ಮಂಜನ್ನು ಕರಗಿಸುತ್ತಿದ್ದಾರಂತೆ.

ಕಾರುಗಳ ಮೇಲೆ ಬಿದ್ದ ಮಂಜನ್ನು ತೆಗೆಯುವುದೂ ಭಾರೀ ಶ್ರಮದ ಕೆಲಸ. ಅಷ್ಟೊಂದು ಎತ್ತರಕ್ಕೆ ಬಿದ್ದಿರುವ ಮಂಜನ್ನು ಸರಿಸಲು ಹರ ಸಾಹಸವನ್ನೇ ಮಾಡ ಬೇಕಾಗುತ್ತದೆ. ಮೊದಲೇ ಚಳಿ, ಚಳಿಯಲ್ಲಿ ಕೈ ಕಾಲೇ ಆಡದು. ಬಿಸಿ ಬಿಸಿ ಬೋಂಡಾ ಬಜ್ಜಿ ತಿಂದು ಮಜಾ ಮಾಡುವ ಬದಲು ಕಾರುಗಳ ಮೇಲೆ ಬಿದ್ದ ಮಂಜು ತೆಗೆಯುವುದೆಂದರೇನು?

ಮಗನ ಹತ್ತಿರ ಎರಡು ಕಾರುಗಳಿವೆ. ಒಂದನ್ನು ಮಾತ್ರ ಅವನು ಮಂಜನ್ನು ತೆಗೆದು ಬಳಸುತ್ತಿದ್ದಾನಂತೆ. ಇನ್ನೊಂದನ್ನು ಕ್ಲೀನ್ ಮಾಡುವುದು ಆ ಸೂರ್ಯನಿಗೇ ಬಿಟ್ಟಿದ್ದಾನಂತೆ. ಅಷ್ಟರವರೆಗೆ ಆ ಕಾರಿನ ಗತಿ ಏನಾಗುತ್ತದೆ ಎಂದು ಆ ಶಿವನೇ ಬಲ್ಲ.

ಪ್ರತಿ ಬಾರಿ ಮಂಜಿನ ಆರ್ಭಟ ಅವರಿಗೆ ಸಹಜವಾದುದೇ, ಅಲ್ಲಿನ ಅವಘಡ ನಿರ್ವಹಣೆ (ಡಿಸಾಸ್ಟರ್ ಮ್ಯಾನೇಜ್‌ಮೆಂಟ್) ಬಹಳ ಸಮರ್ಪಕವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತದೆ. ನಮ್ಮ ದೇಶದಂತೆ ಅನಾಹುತ ಆಗುವವರೆಗೆ ಕಾದು ನಂತರ ಕ್ರಮಗಳನ್ನು ಕೈಗೊಳ್ಳುವುದಿಲ್ಲ. ಮುಂಜಾಗರೂಕತಾ ಕ್ರಮಗಳನ್ನು ಬಹಳ ಚೆನ್ನಾಗಿ ತೆಗೆದು ಕೊಳ್ಳುತ್ತದೆ. ಆದರೂ ಈ ಬಾರಿ ಮಂಜು 'ನನ್ನ ಮುಂದೆ ನೀನೇನು ಮನುಜಾ' ಎನ್ನುವಂತೆ ಆಟವಾಡಿಸುತ್ತಿದೆ.

'ಎಲ್ಲರೂ ಅಲಾಸ್ಕಾಗೆ ಹೋಗಿ ಮಂಜನ್ನು, ಮಂಜಿನ ಬೆಟ್ಟಗಳನ್ನು ನೋಡಿ ಬರುತ್ತಾರೆ. ಇಲ್ಲಿ ನಾನು ಆಫೀಸಿಗೆ ಹೋಗುವ ಹಾದಿಯಲ್ಲಿ ಅಕ್ಕ ಪಕ್ಕ ಮಂಜಿನ ಗುಡ್ಡಗಳೇ ಇವೆ' ಎಂದ ನನ್ನ ಮಗ ಅರುಣ್. ಹೇಗಿದ್ದರೂ ಪ್ರಕೃತಿಯ ಜತೆಗೆ ಗುದ್ದಾಡುತ್ತಲೇ ಜನರು ಬದುಕಲು ಕಲಿಯಬೇಕು. ಆದರೆ ಜಗತ್ತಿನಲ್ಲಿ ಇದೇನಾಗುತ್ತಿದೆ? ಪ್ರಕೃತಿ ತನ್ನ ಯಾವತ್ತಿನ ರೂಪಗಳನ್ನು ತ್ಯಜಿಸಿ ಹೀಗೆ ಉಲ್ಟಾಪಲ್ಟಾ ಅನುಭವಗಳನ್ನು ಕೊಟ್ಟರೆ ಮನುಷ್ಯರು ನೆಮ್ಮದಿಯಿಂದ ಬದುಕುವುದಾದರೂ ಹೇಗೆ?